ಹೆಣ್ಣ ವಾಸನೆಗೆ ಮಾನವ ಕುಲದ ಬೇರುಗಳ ವಿಳಾಸವಿದೆ. ಆ ಕೂದಲನ್ನು ಆತ ಹಾಗೇ ಎದೆ ಮೇಲೆ ಮಲಗಿಸಿಕೊಂಡು ಸಂತೈಸಿದ. ಅವನೊಬ್ಬ ವಿಚಿತ್ರ ಪಯಣಿಗ. ಆ ಕೂದಲು ಕಂಬನಿ ಸುರಿಸಿ ಅವನ ಎದೆಯನ್ನು ಒದ್ದೆ ಮಾಡಿದಂತೆ ಒಮ್ಮೆ ಅನಿಸಿದರೆ, ಮತ್ತೊಮ್ಮೆ ಮಧುರವಾಗಿ ಅವನ ಎದೆ ಬಡಿತದ ಜೊತೆ ಪಿಸುಮಾತ ಆಡಿಸಿ ರಮಿಸುವಂತಿತ್ತು. ತಾನು ಹೀಗೆ ಈ ಯಾರದೊ ಕೂದಲನ್ನು ಎದೆ ಮೇಲೆ ಮಲಗಿಸಿಕೊಳ್ಳುವುದು ತಪ್ಪಲ್ಲವೇ ಎನಿಸಿತು. ಆತನಕ ಕೂದಲಲ್ಲಿ ಅಡಗಿರುವುದೇ... ಯಾಕೆ ಹೀಗೆ ಪ್ರಾಯ ಮೀರಿದ ಕಾಲದಲ್ಲಿ ಇವಳು ಬಂದಳೊ ಎಂದು ಎದ್ದು ಕೂತ. ಇರುಳ ತಾರೆಗಳ ಜೊತೆ ಕುಣಿಯುತ್ತಿತ್ತು. ಗಂಡುಸಾದರೆ ಗುರುತು ವಿಳಾಸ ಹುಡುಕಿ ಬರುವೆಯಾ ಎಂದು ಆ ಕೂದಲು ಅವನ ಬೆರಳ ಹಿಡಿದು ತೊಡೆ ಮೇಲೆ ಕೂತು ಕೇಳಿತು. ಮೂರು ಲೋಕದ ಯಾವ ಎಲ್ಲೆಯಲ್ಲಿವೆಯೊ... ಹೆಂಗಸಾದರೆ ನೀನು ನನಗೆ ಸಿಗುವೆಯಾ ಎಂದು ಮಂಪರುಗಣ್ಣಲ್ಲಿ ಕೇಳಿದ. ಬಹಳ ದಣಿದಿದ್ದ. ಒಂದು ಗಳಿಗೆಯ ನಿದ್ದೆ ಬಂತು. ಆಗಲೂ ಅವಳು ಅವನ ಕಣ್ಣೊಳಗೆ ಬಂದು ಕೂತಿದ್ದಳು. ಕನಸೊ ನಿಜವೊ ಗೊತ್ತಿರಲಿಲ್ಲ. ನೆತ್ತಿಯಲಿ ಸಾಗಿ ನೋಡಿದಳು. ಅವನಾಗಲೇ ಅವಳ ದಾರಿಗಳ ಲೆಕ್ಕ ಹಾಕುತ್ತಿದ್ದ. ಎದೆಗೆ ಇಳಿದು ದಿಟ್ಟಿಸಿದಳು. ಅವನ ಆತ್ಮ ಅವಳನ್ನು ಧ್ಯಾನಿಸುತ್ತಿತ್ತು.

ಏಳು ಸಮುದ್ರಗಳಾಚೆಯ ಏಳು ಬೆಟ್ಟ ಕಣಿವೆಗಳ ಮರೆಯ ಪಂಜರದ ಗಿಳಿ ನಾನು ಪುರುಷಾ; ಬಂದು ಬಿಡಿಸಿಕೊ; ಬರುವೆ ಎಂದೆಂದೂ ನಿನ್ನ ಹಿಂದೆ ಹಿಂದೆಯೇ ಎಂದು ಆ ಕೂದಲ ಚೆಲುವೆ ತಲೆ ಸವರಿದಂತಾಗಿ ದುತ್ತೆಂದು ಎದ್ದು ಕೂತ. ಆ ಗುಂಗುರು ಕೂದಲು ಅವನ ಮನಸ್ಸನ್ನು ಸುತ್ತಿಕೊಂಡಿತ್ತು. ವಯ್ಯಾರದಲಿ ಕರೆಯುತ್ತಿತ್ತು. ಪ್ರಾಯದ ಕಾಲ ಬಹಳ ಕಡಿಮೆ; ವಿರಹದ ದುಃಖ ಬಹಳ ದೀರ್ಘವಾದುದು. ಎಲ್ಲಾ ರೀತಿಯಿಂದಲೂ ಅಳಿದೂ ಸುರಿದೂ ಅವಳ ಕುರುಹಿಗಾಗಿ ತಡಕಾಡಿದ. ದೇವರನ್ನು ಹುಡುಕುವ ದಾರಿಯಲ್ಲೆ ಈ ಹೆಣ್ಣನ್ನೂ ಕೂಡ ಪತ್ತೆ ಮಾಡಬಹುದಲ್ಲವೇ ಎನಿಸಿತು. ಮರುದಿನ ಆತ ಆ ನಗರ ಬಿಟ್ಟು ಇನ್ನೊಂದು ನಗರಕ್ಕೆ ವಿಮಾನದಲಿ ಹಾರಿ ಹೋದ. ಅವನ ತಲೆಯಲ್ಲೊ, ಪ್ರಜ್ಞೆಯಲ್ಲೋ ಆ ಚೆಲುವೆಯ ಕೂದಲು ಹೊಳೆಯಾಗಿ ತೇಲಿ ಬರುತ್ತಲೇ ಇತ್ತು. ಅವಳ ಚಹರೆಗಾಗಿ ಆತ ಪ್ರಾರ್ಥಿಸುತ್ತಲೇ ಇದ್ದ. ಅವಳ ಬದಲಿಗೆ ತಾನೇ ನಿನ್ನ ಮುಂದೆ ಬಂದು ಪ್ರತ್ಯಕ್ಷ ಆಗುವೆ ಎಂದು ದೇವರೇ ಕೇಳಿದ್ದಿದ್ದರೆ, ಆತ ಮೊದಲು ಅವಳನ್ನು ತೋರಿಸು ಎಂದೆನ್ನುತ್ತಿದ್ದನೇನೋ. ಹೆಣ್ಣು ದೇವರಿಗಿಂತ ಮಿಗಿಲಾದವಳೇ... ಆ ನೀಳ ಕೂದಲು ಅವನ ಕೊರಳ ತಬ್ಬಿಕೊಂಡು ಏನೊ ಬಿಕ್ಕಿತು, ನಕ್ಕಿತು, ನಿಟ್ಟುಸಿರು ಬಿಟ್ಟಿತು... ಏನೊ ಆಕ್ರಂದಿಸಿ ಏನೊ ಮೊಳಗಿತು. ಹೆಣ್ಣ ಅಮರ ಸೆಳೆತದಲ್ಲಿ ಆತ ಸಿಲುಕಿದ್ದ.

ಬಹಳ ಕಾಲದ ತನಕ ಆ ಚೆಲುವೆಯ ರಮ್ಯ ಮಾಂತ್ರಿಕ ಕೂದಲ ಜೊತೆ ಸಂಸಾರ ಮಾಡಿದಂತೆ ಇಳಿಗಾಲವ ಮುಟ್ಟಿದ. ಮುಪ್ಪು ಬಾಧಿಸಿ ದೃಷ್ಟಿ ಮಂಜಾಯಿತು. ಚೆಲುವೆಯ ಕೂದಲು ನೀನಿನ್ನೂ ಬಂದಿಲ್ಲವಲ್ಲಾ, ದಾರಿಯ ಯಾವ ತಿರುವಿನಲ್ಲಿ ಇದ್ದೀಯಾ ಎಂದು ಬಾಡಿದ ದನಿಯಲ್ಲಿ ಕೇಳಿತು. ನಶ್ವರತೆ ಅಲುಗಾಡಿ ಏನು ಮುದುಕಾ, ಏನು ಯೋಚಿಸುತ್ತಿರುವೆ ಎಂದು ಕೇಳಿತು. ಮುಪ್ಪು ನನಗಿರಬಹುದಷ್ಟೇ; ನನ್ನೊಳಗೆ ಅವಳಿದ್ದಾಳಲ್ಲಾ ಆ ಕೂದಲ ಚೆಲುವೆ, ಅವಳು ನಿಸರ್ಗ; ಪ್ರಕೃತಿ. ನಿಸರ್ಗಕ್ಕೆ ಮುಪ್ಪಿಲ್ಲ ಎಂದು ತನ್ನೊಳಗೇ ಹೇಳಿಕೊಂಡ. ಸಾವಿರಾರು ಚೆಲುವೆಯರ ಬೆರಳೆಲ್ಲ ಒಂದೇ ಬೆರಳಾಗಿ ಅವನ ಕೈ ಹಿಡಿದು ನಡೆದಂತೆ ಆ ಕೂದಲು ಅವನನ್ನು ಮುಂದಕ್ಕೆ ಕರೆದೊಯ್ದಿತ್ತು.